O.S.No.:70/2020
D.W.:2

ಈ ದಿನ ದಿಃ04.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಎಸ್.ವಿ.ವಿ ರವರಿಂದಃ-</u>

1. ಈ ದಾವೆಯನ್ನು ವೆಂಕಟಪ್ಪ ರವರು ಪುಟ್ಟಮರಿಗೌಡ ರವರ ವಿರುದ್ದ ಹೂಡಿರುತ್ತಾರೆ. ಅವರನ್ನು ಹೊರತುಪಡಿಸಿ ಬೇರೆ ಯಾರ ವಿರುದ್ದ ಈ ದಾವೆ ಹೂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಸರ್ವೆ ನಂ.149/1ರಲ್ಲಿ ವಿಸ್ತೀರ್ಣ 1ಎಕರೆ 26 ಗುಂಟೆ ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ವಾದಿಯು ಹೂಡಿರುತ್ತಾರೆ. ವಾದಿಯು ಜಮೀನು ಬಿಟ್ಟುಕೊಡುವಂತೆ ಕೋರಿ ಈ ದಾವೆ ಸಲ್ಲಿಸಿರುತ್ತಾರೆ. ಜಮೀನು ಬಿಟ್ಟುಕೊಡುವ ವಿಚಾರವನ್ನು ನನಗೆ ಯಾರು ಹೇಳಿರುವುದಿಲ್ಲ.

2. ನನ್ನನ್ನು ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು 3ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ನನ್ನ ಮುಖ್ಯವಿಚಾರಣೆಯನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಸರ್ವೆ ನಂ.149/1ರ ಜಮೀನಿನ ಪಹಣಿ ಪತ್ರಿಕೆಯು ಈಗ ವಾದಿಯ ಹೆಸರಿಗೆ ಇರುತ್ತದೆ. ವಾದಿಯ ಹೆಸರಿಗೆ ದಾವಾಸ್ವತ್ತಿನ ಖಾತೆಯು ಯಾವ ಆಧಾರದ ಮೇಲೆ ಆಗಿರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಗಳ ಮತ್ತು ನಮ್ಮ ಮನೆಗೂ 150 ಅಡಿ ಅಂತರ ಇರಬಹುದು.

ಪ್ರತಿವಾದಿಗಳು ನನ್ನ ಸಂಬಂಧಿಕರು ಅಲ್ಲ ಎಂದರೆ ಸರಿ. ಪ್ರತಿವಾದಿಗಳ ಕುಟುಂಬದಲ್ಲಿ ನಡೆಯುವಂತಹ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸರ್ವೆ ನಂ.149/2ರ ಜಮೀನು ನನಗೆ ಸೇರಿದ್ದು ಎಂದು ತೋರಿಸಲು ಈ ದಾವೆಯಲ್ಲಿ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ.

3. ದಾವಾಸ್ವತ್ತಿನ ಪೂರ್ವಕ್ಕೆ ಕಮಲಮ್ಮ ಮತ್ತು ನಾಗರಾಜು ರವರ ಜಮೀನು ಇದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅದು ನಮ್ಮ ದೊಡ್ಡಮ್ಮ ರವರ ಜಮೀನು ಎಂದು ನುಡಿಯುತ್ತಾರೆ. ದಾವಾಸ್ವತ್ತಿಗೆ ಹೊಂದಿಕೊಂಡಂತೆ ನನಗೆ ಸಂಬಂಧಿಸಿದ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾಸ್ವತ್ತಿನಲ್ಲಿ ಎಷ್ಟು ವರ್ಷಗಳಿಂದ ಸ್ವಾಧೀನದಲ್ಲಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರ ತಾತನವರ ಕಾಲದಿಂದಲ್ಲೂ ಇದ್ದಾರೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ 20 ಗುಂಟೆ ಜಮೀನಿನಲ್ಲಿ ನೀವು ಸೀಮೆ ಹುಲ್ಲು ಹಾಕಿದ್ದೀರಿ ಎಂದು ತೋರಿಸಲು ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ, ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

4. ಪ್ರತಿವಾದಿಗಳು ಸಾಲದ ಭದ್ರತೆಗಾಗಿ ಬರೆದುಕೊಟ್ಟಿದ್ದಾರೆ ಎಂದು ಹೇಳುವ ಖರೀದಿ ಪತ್ರದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ಪ್ರತಿವಾದಿಗಳು

ತಮ್ಮ ಕುಟುಂಬದ ಹಣಕಾಸಿನ ಅವಶ್ಯಕತೆಗಳಿಗೋಸ್ಕರ ದಾವಾಸ್ವತ್ತನ್ನು ದಿನಾಂಕ.09.02.2015ರಂದು 16ಲಕ್ಷದ 50 ಸಾವಿರ ರೂಪಾಯಿಗಳಿಗೆ ವಾದಿಗೆ ನೋಂದಾಯಿತ ಕ್ರಯಪತ್ರದ ಅಡಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರ ನೋಂದಣಿ ಆದ ದಿನದಂದೆ ದಾವಾಸ್ವತ್ತಿನ ಸ್ವಾಧೀನಾವನ್ನು ಸಹ ಪ್ರತಿವಾದಿಗಳಿಗೆ ವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇಲೆ ದಾವಾಸ್ವತ್ತಿಗೆ ಸಂಬಂಧಿಸಿದ ಖಾತೆಯು ವಾದಿಯ ಹೆಸರಿಗೆ ಬದಲಾಗಿರುತ್ತದೆ ಎಂದರೆ ಸರಿ. ಕ್ರಯದ ದಿನದಿಂದಲ್ಲೂ ದಾವಾಸ್ವತ್ತಿನಲ್ಲಿ ವಾದಿಯೇ ಸ್ವಾಧೀನಾನುಭವದಲ್ಲಿದ್ದು, ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾಸ್ವತ್ತಿನಲ್ಲಿ ಕ್ರಯದ ದಿನಾಂಕದಿಂದಲ್ಲೂ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನಲ್ಲಿ 20 ಗುಂಟೆ ಜಮೀನಿನಲ್ಲಿ ಯಾವುದೇ ಸೀಮೆಹುಲ್ಲು ಹಾಕಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು, ಸದರಿ ಕ್ರಯಪತ್ರವನ್ನು ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುತ್ತಾರೆಂದು ಪ್ರತಿವಾದಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸಹಾಯ ಮಾಡಲು ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

O.S.No.:70/2020
D.W.:2

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**